# ಎನ್‌ಐಟಿಕೆಯಲ್ಲಿ ಎಂಜಿನಿಯರಿಂಗ್ ಉತ್ಸವ – 2024 ಉದ್ಘಾಟನೆ



**ಸುರತ್ಕಲ್, ಅ. 17:** ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ, ಸುರತ್ಕಲ್ ವತಿಯಿಂದ 'ಎನ್ಚ್ಯಾಂಟೆಡ್ ಕಾಸ್ಮೋಸ್' ಎಂಜಿನಿಯರಿಂಗ್ ಉತ್ಸವ – 2024 ಉದ್ಘಾಟನೆ ಗುರುವಾರ ನಡೆಯಿತು.ಈ ಮೂರು ಉತ್ಸವದಲ್ಲಿ 25 ಸಾವಿರಕ್ಕೂ ಹೆಚ್ಚು ಸಂದರ್ಶಕರು ಆಗಮಿಸುವ ನಿರೀಕ್ಷೆಯಿದೆ. ಹ್ಯಾಕಥಾನ್, ಆಟೋ ಎಕ್ಸ್‌ಪೋ, ಗೇಮಿಂಗ್ ಈವೆಂಟ್‌ಗಳು, ಟೆಕ್‌ನೈಟ್ಸ್ ಪ್ರಾಜೆಕ್ಟ್‌ಗಳು, ರೋಬೋಕಾನ್ಸ್ ಎಕ್ಸ್‌ಪೋ, ಟ್ರೋನಿಕ್ಸ್ ಎಕ್ಸ್‌ಪೋ ಸೇರಿದಂತೆ ವಿವಿಧ ತಾಂತ್ರಿಕ ಡೊಮೇನ್‌ಗಳಲ್ಲಿ 30ಕ್ಕೂ ಹೆಚ್ಚು ಉತ್ಸವದಲ್ಲಿ ಪ್ರದರ್ಶನ ಒಳಗೊಂಡಿದೆ. ಡ್ರೋನ್ ರೇಸಿಂಗ್, ವರ್ಚುವಲ್ ಸ್ಕೈ ಟೂರ್ ಸಹಿತ ವಿವಿಧ ಪ್ರಾಯೋಗಿಕ ಹಾರಾಟ ವ್ಯವಸ್ಥೆ ಮಾಡಲಾಗಿದೆ.ಉದ್ಘಾಟನ ಸಮಾರಂಭದಲ್ಲಿ ಹಟ್ಟಿ ಗೋಲ್ಡ್ ಮೈನ್ಸ್ ಸಂಸ್ಥೆಯ ಎಂ.ಡಿ. ಶಿಲ್ಪಾ ಆರ್., ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಗೌರವ ಅತಿಥಿಗಳಾಗಿದ್ದರು. ಎನ್‌ಐಟಿಕೆ ಉಪನಿರ್ದೇಶಕ ಪ್ರೊ। ಸುಭಾಷ್ ಸಿ. ಯರಗಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ। ಎ.ಸಿ. ಹೆಗಡೆ, ಡಾ। ಎಸ್.ಬಿ. ಆರ್ಯ, ಪ್ರಭಾರಿ ಪ್ರೊಫೆಸರ್–ಎಂಜಿನಿಯರ್ ಮತ್ತು ಟೆಕ್ನಿಕಲ್ ಕ್ಲಬ್‌ಗಳು ಉಪಸ್ಥಿತರಿದ್ದರು.

Udayavani, Date:18/10/24, p, no -02